


ನನಮಗನೆ. ಮೈಮ್ಯಾಗೆ ಗ್ಯಾನ ಐತೊ ಇಲ್ಲವೊ. ಅನ್ನ ಅನ್ನೋದು ಸುಮ್ಮನೆ ತಟ್ಟೆಗೆ ಬರೋಲ್ಲವೋ. ಹಗಲು ರಾತ್ರಿ ದುಡಿಬೇಕು ಗೇಯಬೇಕು. ಇಂಥ ಹೊತ್ತಿನಾಗ ಭಜನೆ ಮಾಡಾಕೆ ಹೋಗಿದಿಯಲ್ಲೋ. ಮನೆಹಾಳು ನನಮಗನೆ" ಅಂದವ ಸಿಟ್ಟಿನಲ್ಲಿ ಕಾಲೆತ್ತಿ ಒದೆಯಾಕೆ ಬಂದ. ಅತ್ತಿಗೆಮ್ಮ ಬಂದು ಬಿಡಿಸಿದೊ. ಆವತ್ತು ಊರು ಬಿಟ್ಟವ ಎತ್ತೆತ್ತಲೋ ಹೋಗುತಾ ಹಿಮಾಲಯ ಸೇರಿದೆ. ಅಲ್ಲೊಷ್ಟು ದಿನ ಕಳಿಯತ್ಗೆ ಉತ್ತರದವ ಒಬ್ಬ ಜೊತೆಯಾದ. ತನ್ನ ಊರಿಗೆ ಕರಕಂದೋದ. ಉತ್ತರ ಪ್ರದೇಶದ ಹಳ್ಳಿ. ಅಲ್ಲೊಂದು ಹೆಣ್ಣೋಡಿ ಮದುವೆ ಮಾಡಿದ. ಇಪ್ಪತ್ತು ವರ್ಷ ಜೀವನ ಮಾಡಿದೆ, ಮಕ್ಕಳಿಲ್ಲ ಮರಿಯಿಲ್ಲ. ಹೆಂಡತಿ ಬೇಗ ತೀರೋದಳು. ಬೇಜಾರಾತು. ಇದ್ದ ಆಸ್ತಿ ಮಾರಿ ಇಲ್ಲಿ ಊರಿಗೆ ಬಂದೆ. ಅಂತ ಆವತ್ತೊಂದಿನ ಹೋಟೆಲ್ ಚನ್ನಕ್ಕನಿಗೆ ಬಿಡಿಸಿ ಹೇಳಿದ ಶಾಂತಪ್ಪ.

ಅದೊಂದಿನ ಬೆಳಿಗ್ಗೆ ಬೇವಿನಕಡ್ಡೀಲಿ ಹಲ್ಲುಜ್ಜತಾ ಬರ್ತಾ ಇರುವಾಗ ಅಣ್ಣನ ಮಗಾಂತ ಕಾಣ್ದದೆ ಬೈಕಲ್ಲಿ ಬರ್‍ರನೆ ಬರೋವ ಇದ್ದಕಿದ್ದಂಗೆ ಮ್ಯಾಲೆ ನುಗ್ಗಿಸಾಕೆ ನೋಡಿದ. ಚಣಲ್ಲನೆ ರಸ್ತೆಬಿಟ್ಟು ಪಕ್ಕದ ಗದ್ದೆಗೆ ಹಾರಿದೆ. ಉಳಿದೆ. ಇಲ್ಲಾಂದ್ರೆ ಜೀವ ಇಷ್ಟೊತ್ಗೆ ಹರೋಹರ.

ಇದಾದ ಹದಿನೈದು ದಿನ ಆಗಿರಬೇಕು. ಹಳ್ಳದಕಡೆ ಹೋಗುವಾಗ ಮೂರು ಜನ ಬಲವಾದೋರು ಕೈಯಲಿ ಮಾರುದ್ದದ ದೊಣ್ಣೆ ಹಿಡಕಂಡು ಬಂದರು. ತೋಳು ಕಾಣಂಗೆ ಶರಟು ಮಡಿಚಿದ್ರು. ಪೈಲ್ವಾನ್ ಲುಂಗಿ ಉಟ್ಟಿದ್ದರು. ಅವರು ನನ್ನನ್ನ ನೋಡೋ ರೀತಿ ನೋಡಿದರೆ ಏನೋ ಅನುಮಾನ ಬಂತು. ಹಳ್ಳಕೆ ಹೋಗೋವಾಗ ಹೊಲಕೆ ಹೋಗೊ ಹೊಲದವರು ಕೂಲಿ ಹೆಂಗಸರು ತಲೆಮ್ಯಾಲೆ ರೊಟ್ಟಿಗಂಟು ಇಟಗಂಡು ಎಲೆ ಅಡಿಕೆ ಹಾಕ್ಕೋತಾ ಹೋಗುತಿದ್ರು. ಅವರ ಮಧ್ಯೆ ಸೇರಿಕೊಂಡು ಮೂರು ಜನ ಹತ್ರ ಬರೋಹೊತ್ಗೆ ಹಂಗ್ ಹಿಂಗ್ ಎಪ್ಪೆಹಾಕಿ ಹೊಲದ ಬೆಳೆಯಾಗಿಂದ ಊರು ಸೇರಿ ಜನ ಹೆಚ್ಚಿರೋ ಹೋಟ್ಲು ಮನೆ ಸೇರಿದ. ಅದಾರೋ ನನ ಮ್ಯಾಲೆ ಕಣ್ಣಿಟ್ಟವರೆ ಅನಿಸ್ತು.

ಮತ್ತು ಒಂದಿನ ಅಣ್ಣನ ಮಗ ದೊಡ್ಡೋನು ಟ್ರಾಕ್ಟರ್‌ನ ಮ್ಯಾಲೆ ನುಗ್ಗುಸಾಕೆ ನೋಡಿದ. ಓಹೋ ಇದು ಹಿಂಗೆ ಅಂತ ಗೊತ್ತಾಗಿ ರಸ್ತೆ ಆಚೆಗೆ ಉರುಳಿದೆ. "ಹೋಗು ಇವತ್ತು ಬದುಕಿದಿಯ ಮುದುಕ" ಅಂದ ಅವ. ತರ ತರ ನಡುಗಿ ಹೋದೆ. ಎಷ್ಟೋ ಹೊತ್ತು ನಡುಗು ನಿಲ್ಲಲೇ ಇಲ್ಲ. ತಲೆ ಚಿಟ್ ಹಿಡೀತು. ಹನುಮಂತೇವ್ರ ಗುಡೀಲಿ ಮಲಗಾಕು ಭಯ. ಇನ್ನೆಲ್ಲಿ ಮಲಗಲಿ? ಯಾವಾಗ ಯಾರು ಬಂದು ಬಡಿದು ಹಾಕ್ತಾರೋ ಅನ್ನೊ ಚಿಂತೆ ಮುತ್ತಿತ್ತು. ಗಳಿಗೆಗು ತಾಸಿಗು ಜೀವ ಭಯ ಆತು. ದೇಶ ಸೀಮೆ ಬಿಟ್ಟು ಬಂದಿರೋದು ಹೌದು. ಯಾವಾಗ ಬೇಕಾದರು ಈ ಜೀವ ಗೊಟ್ ಅನ್ನಲಿ. ಊರೋರೆ ಮಣ್ಣು ಮಾಡ್ತಾರೆ ಅಂತಲೆ ಬಂದೆ. ಜೀವ ಅದಾಗಿ ಹೋದರೆ ಹೋಗಲಿ. ಹೀಗೆ ಹೊಡಿಸ್ಗೆಂದು ಬಡಿಸ್ಗೆಂದು ಸಾಯೋದೆಂಗೆ? ಆದೋಟು ಜನ ಇರುವಲ್ಲೆ ಇದ್ದ.